ಶೀಟುಗಳಿಗೆ ಕಡಲಿನ ಗಾಳಿ ಜೋರಾಗಿ ಬೀಸುತ್ತಿತ್ತು.

"ನೋಡಿದಿಯಾ ಎಂತಹ ನಿಶ್ಶಬ್ದ! ಏಕಾಂತ! ಇಲ್ಲಿ ನಾನೂ ನೀನೂ ಮಾತ್ರ. ಇಲ್ಲೇ ಪಕ್ಕದಲ್ಲಿ ನಾನು ಕೆಲಸ ಮಾಡ್ತೊ ಫ್ಯಾಕ್ಟರಿ ಇರೋದು."

ಅವಳು ತಲೆಯಾಡಿಸಿದಳು.

"ಫ್ಯಾಕ್ಟರಿಯ ಗಡಿಯಾರದ ಶಬ್ದ ಸಹ ನಮಗೆ ಮನೆಯ ಕೋಣೆಯಲ್ಲಿದ್ದಾಗ ಕೇಳಿಸುತ್ತೆ."

ಕಬ್ಬಿಣಗಳಿಂದ ಕೆಲಸ ಮಾಡುವ ಫ್ಯಾಕ್ಟರಿಯಲ್ಲಿರುವ ಗಡಿಯಾರದ ಗಂಟೆ ಹೊಡೆಯುವ ಶಬ್ದ, ಹೊರಗಡೆಗೆ ಕೇಳಿಸೊಕೆ ಸಾಧ್ಯವಿಲ್ಲಾಂತ ಅವಳಿಗೆ ಚೆನ್ನಾಗಿ ಗೊತ್ತಿದೆ.

"ಸೈರನ್ನಿನ ಶಬ್ದ ಕೇಳಿಸುವಾಗ, ಚಪ್ಪಲಿ ಹಾಕ್ಕೊಂಡು ಹೊರಟರೆ ಸಾಕಾಗತ್ತೆ!" ಅವಳು ಹೇಳಿದಳು.

"ಎಲ್ಲ ಅನುಕೂಲಗಳು ಇವೆ! ಈ ಮನೆ ನಿಮಗೆ ಹೇಗೆ ಸಿಕ್ತು?..."

"ಇದಾ! ನನ್ನ ಸ್ನೇಹಿತನ ಅಪ್ಪಾನೆ ಈ ಮನೆಯ ಮಾಲೀಕ!"

ಅವರಿಗೆ ಮನೇನ ವ್ಯವಸ್ಥೆ ಮಾಡಿಕೊಡೊದಿಕ್ಕೆ ಅಲ್ಲಿ ಜನರು ಕಾದುಕೊಂಡು ನಿಂತಿದ್ದಾರೆ. ಸ್ನೇಹಿತರು, ನೆಂಟರು, ಪರಿಚಯದವರು, ಕೇಳಿ ತಿಳಿದುಕೊಂಡವರು.

ಇವರನ್ನ ಇಲ್ಲಿ ವಾಸ ಮಾಡಿಸೋಕೆ ಅವರಿಗೆಲ್ಲ ಹೆಚ್ಚಿನ ಆಸಕ್ತಿ.

ಎಲ್ಲ ಕೋಣೆಗಳು ಒಂದೆ ತರಹ ಇವೆ. ದೂಳೇಳುವಂತಹ ಒರಟು ನೆಲ. ಹೊಸತಾಗಿ ಬಣ್ಣ ಬಳಿದ ಗಾಜಿನ ಕಿಟಕಿಗಳು, ಬಾಗಿಲುಗಳು. ನಗ್ನವಾಗಿರುವ ಬಿಳಿಚಿದ ಗೋಡೆಗಳು, ಕತ್ತಲೆಯ ಅಟ್ಟಗಳು.

ಬಹುಶಃ ಅದೊಂದು ಫ್ಯಾಕ್ಟರಿ ಕಟ್ಟಡವಾಗಿದ್ದಿರಬೇಕೆಂದು ಅನಿಸಿತು.

ಜೊತೆಯಲ್ಲಿ ಬರುವಾಗ ತಂದಿದ್ದ ವಿವಿಧ ತರಹದ ಪೀಠೋಪಕರಣಗಳನ್ನು ಅವರು ಕೂರುವ ಕೋಣೆ, ಮಲಗುವ ಕೋಣೆ, ಡೈನಿಂಗ್ ಕೋಣೆ, ಅಡುಗೆಕೋಣೆ, ಉಗ್ರಾಣದ ಕೋಣೆ ಹೀಗೆ ಎಲ್ಲ ಕೋಣೆಗಳಲ್ಲಿ ವಿಂಗಡಿಸಿ, ಜೋಡಿಸಿಟ್ಟರು.

ಕೇವಲ ಒಂದು ಕಟ್ಟಡ ಮಾತ್ರವಾಗಿದ್ದನ್ನು ವಾಸಮಾಡುವ ಒಂದು ಮನೆಯನ್ನಾಗಿ ತಯಾರು ಮಾಡಿದ ಅವರ ಕುಶಲತೆ ಕಂಡು ಅವಳಿಗೆ ವಿಸ್ಮಯವಾಯಿತು.

ತಾನೊಂದು ಮನೆಯೊಳಗಿದ್ದೇನೆ ಎನ್ನುವ ಅನುಭವ ಇದೀಗ ಅವಳಿಗೆ ಆಗ ತೊಡಗಿತು.

ನೋಡಿದ್ರಾ! ಮನೆ ಅಂದ್ರೆ ಹೀಗಿರಬೇಕು. ಈ ರೀತಿ ಎಷ್ಟೊಂದು ಮನೆಗಳನ್ನು ಅಣಿಗೊಳಿಸಿ ಕೊಟ್ಟಿದ್ದೇವೆ! ಎನ್ನುವಂತಹ ಭಾವನೆ ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು.

ಸೀಮೆಎಣ್ಣೆ ವಾಸನೆಯ ಚಹಾ ಕುಡಿದು ಅವರು ಅಲ್ಲಿಂದ ಬೀಳ್ಕೊಂಡು ಹೊರಟು ಹೋದರು.

ಅವಳೀಗ ಒಬ್ಬಂಟಿಯಾದಳು.

ಅವಳನ್ನು ಅಪ್ಪಿಕೊಂಡು ಚುಂಬಿಸಿ ಗಂಡ ಹೇಳಿದ:

"ಚಿನ್ನಾ... ಈಗ ನಾವಿಬ್ರೆ! ಇನ್ಯಾರದ್ದು ರಗಳೆ ನಮಗಿರೋದಿಲ್ಲ."

ಅವಳು ನಕ್ಕಳು.

"ಹಗಲಿನ ಕೆಲಸಗಳಿಗೆ ಸಹಾಯ ಮಾಡೋದಿಕ್ಕೆ ಒಬ್ಬಳು ಕೆಲಸದವಳು ಬರ್ತಾಳೆ. ಅಷ್ಟು ಸಾಕಲ್ಲ? ಅದಲ್ಲವೆ ಒಳ್ಳೆಯದು?"

"ಹೌದು!"

ಆದರೆ, ರಾತ್ರಿ ಅವಳಿಗೆ ನಿದ್ರೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ.

ಪ್ರಯಾಣದ ಮಧ್ಯೆ ಯಾವುದೋ 'ಕೂಡು ರಸ್ತೆ'ಯಲ್ಲಿ ಅವಳ ನಿದ್ರೆ ಹಾಳಾಗಿತ್ತು.

ಬಿಸಿಲು ಕೋಣೆಯೊಳಗೆ ಕಾವುಕೊಡುತ್ತಿತ್ತು.

ಗಂಡ ಎಲ್ಲ ಕಿಟಕಿಗಳನ್ನು ತೆರೆದಿಟ್ಟ. ಫ್ಯಾನಿನ ವೇಗ ಹೆಚ್ಚಿಸಿದ. ಹಗಲೂ ರಾತ್ರಿ ಕಾರ್ಯನಿರ್ವಹಿಸುವ